International Journal of Kannada Research
www.kannadajournal.com

ISSN: 2454–5813
IJKR 2024; 10(4): 13-17
© 2024 IJKR
www.kannadajournal.com
Received: 22-07-2024
Accepted: 26-08-2024

**ಡಾ. ಕುಮಾರ ಇಂದ್ರಬೆಟ್ಟ**
ಸೈಂಟ್ ಕ್ಲಾರೆಟ್ ಕಾಲೇಜು,
ಸ್ವಾಯತ್ತ ಜಾಲಹಳ್ಳಿ, ಬೆಂಗಳೂರು,
ಕರ್ನಾಟಕ, ಭಾರತ

**Corresponding Author:**
**ಡಾ. ಕುಮಾರ ಇಂದ್ರಬೆಟ್ಟ**
ಸೈಂಟ್ ಕ್ಲಾರೆಟ್ ಕಾಲೇಜು,
ಸ್ವಾಯತ್ತ ಜಾಲಹಳ್ಳಿ, ಬೆಂಗಳೂರು,
ಕರ್ನಾಟಕ, ಭಾರತ

# ದಲಿತ ಮಹಿಳಾ ಕಾವ್ಯದಲ್ಲಿ ಸ್ತ್ರೀ ಶೋಷಣೆಯ ನೆಲೆಗಳು

**ಡಾ. ಕುಮಾರ ಇಂದ್ರಬೆಟ್ಟ**

**ಅಮೂರ್ತ**
ಕನ್ನಡದ ದಲಿತ ಸಾಹಿತ್ಯವು ಈ ಹಿಂದಿನ ಸಾಹಿತ್ಯ ಪರಂಪರೆಗಳಿಂತ ತೀರ ಭಿನ್ನವಾದ ಸಾಹಿತ್ಯಭಿವ್ಯಕ್ತಿಯಾಗಿದೆ.ಕಾರಣ ಅದರ ವಸ್ತು, ಸ್ವರೂಪ ಮತ್ತು ಧೋರಣೆಗಳಿಂದ.ಅಂದರೆ, ಶತಮಾನಗಳಿಂದ ಹಕ್ಕು ಮತ್ತು ಬಾಧ್ಯತೆಗಳನ್ನು ಕಳೆದುಕೊಂಡ ದಲಿತರು ನಿರಂತರ ಶೋಷಣೆಗೆ ಗುರಿಯಾಗಿದ್ದರು.ಹೀಗೆ ಶೋಷಣೆಗೆ ಗುರಿಯಾದ ಸಮುದಾಯಗಳು ಅಂಬೇಡ್ಕರ್ ಚಿಂತನೆಗಳ ಪ್ರಭಾವದಿಂದ ಎಚ್ಚರಗೊಂಡು ತಮಗಾಗುತ್ತಿರುವ ಅಸಮಾನತೆ, ಶೋಷಣೆಯನ್ನು ತೀಕ್ಷ್ಣವಾಗಿ ತಮ್ಮ ಸಾಹಿತ್ಯ ಕೃತಿಗಳಲ್ಲಿ ಅನಾವರಣಗೊಳಿಸಿದರು.ಹಾಗೆಯೇ, ಆ ಶೋಷಣೆಯನ್ನು ಸಾಹಿತ್ಯದ ಮೂಲಕ ಪ್ರತಿಭಟನೆಯು ಸಹ ಮೊಳಗತೊಡಗಿತು.ಇಂದು ಪ್ರಜ್ಞೆ ಕಳೆದುಕೊಂಡಿದ್ದ ಸಮುದಾಯವೊಂದು ಎಚ್ಚೆತ್ತು ಬೀದಿಗಿಳಿದು ತಮ್ಮ ನೋವು, ಆಕ್ರೋಶಗಳನ್ನು ಸಮಾಜಕ್ಕೆ ಪರಿಚಯುಸುವುದರ ಜೊತೆಗೆ ಪ್ರಭುತ್ವಕ್ಕೂ ಬಿಸಿಮುಟ್ಟಸತೊಡಗಿದರು.ಈ ಹಿನ್ನೆಲೆಯಲ್ಲಿಯೇ ದಲಿತ ಮಹಿಳೆಯರು ಸಹ ಇದರ ಭಾಗವಾಗತೊಡಗಿದರು.ದಲಿತ ಮಹಿಳೆಯರೂ ಸಹ ತಮ್ಮ ಸಾಹಿತ್ಯ ಕೃತಿಗಳ ಮೂಲಕ ತಮಗಾದ ಅನ್ಯಾಯದ ವಿರುದ್ಧ, ಜಾತಿಯ ಅಸಮಾನತೆ, ಲೈಂಗಿಕ ದೌರ್ಜನ್ಯ, ಲಿಂಗ ಅಸಮಾನತೆ, ದೇವದಾಸಿ ಪದ್ಧತಿ ಮೊದಲಾದವುಗಳಿಂದ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿದ್ದರು. ದಲಿತ ಮಹಿಳೆಯರು ತಾವು ಕಳೆದುಕೊಂಡಿದ್ದ ಅಸ್ಮಿತೆ, ಅಸ್ತಿತ್ವವನ್ನು ಕಾವ್ಯದ ಮುಖೇನ ಹುಡುಕುವ ಪ್ರಯತ್ನವನ್ನು ಮಾಡಿದ್ದಾರೆ. ಪ್ರಸ್ತುತ ದಲಿತ ಮಹಿಳೆಯರು ನಮ್ಮ ಸಾಮಾಜಿಕ ವ್ಯವಸ್ಥೆಯು ಹತ್ತಿಕ್ಕಲ್ಪಟ್ಟ ಹಕ್ಕುಗಳನ್ನು ಶೋಧಿಸುತ್ತಾ ತಮಗಾದ ಅನ್ಯಾಯವನ್ನು ಸಮಾಜಕ್ಕೆ ಎತ್ತಿತೋರಿಸಿ ಅಂತಹ ಅನ್ಯಾಯದ ವಿರುದ್ಧ ಸಾಮುದಾಯಿಕವಾಗಿ ಪ್ರತಿರೋಧ ವ್ಯಕ್ತಪಡಿಸುವ ನೆಲೆಯಲ್ಲಿ ಹೊಸ ತಲೆಮಾರಿನ ದಲಿತ ಕವಯಿತ್ರಿಯರ ಕಾವ್ಯದಲ್ಲಿ ವ್ಯಕ್ತವಾಗಿದೆ.

**ಮುಖ್ಯಸೂಚಿಪದಗಳು:** ಪುರುಷಾಧಿಕ್ಯತೆ, ಶ್ರೇಣಿಕೃತ ಸಮಾಜ, ಧರ್ಮ ಸಂಕೊಲೆ, ಮಹಿಳಾ ಮೀಸಲಾತಿ, ದೇವದಾಸಿಪದ್ಧತಿ, ಸಾಂಸ್ಕೃತಿಕ ರಾಜಕಾರಣ, ಪ್ರತಿರೋಧ, ಸಾಮಾಜಿಕ ಚಳುವಳಿ

**ಪೀಠಿಕೆ**
ಭಾರತೀಯ ಶ್ರೇಣಿಕೃತ ಸಮಾಜದಲ್ಲಿ ದಲಿತರು ಅಥಾತ್ ದಲಿತ ಮಹಿಳೆಯರು ಹಲವು ಬಗೆಯ ಶೋಷಣೆಗೆ ಗುರಿಯಾಗುತ್ತಿದ್ದಾರೆ.ಈ ಶೋಷಣೆಗೆ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಕಾರಣಗಳಿವೆ ಎಂಬುದಂತು ಸ್ಪಷ್ಟ.ಇಂತಹ ಶೋಷಣೆಗಳಿಗೆ ಹೊಸ ತಲೆಮಾರಿನ ದಲಿತ ಮಹಿಳಾ ಕಾವ್ಯವು ಪ್ರತಿರೋಧವನ್ನು ಪ್ರಕಟಿಸುತ್ತದೆ.ಇವರ ಕಾವ್ಯದಲ್ಲಿ ಈ ಬಗೆಯ ಪ್ರತಿರೋಧಕ್ಕೆ ಸಾಮಾಜಿಕ ಚಳುವಳಿಗಳು, ಸಿದ್ಧಾಂತಗಳು, ವಾದಗಳು, ಅಂಬೇಡ್ಕರ್‌ರಂತವರ ವಿಚಾರಧಾರೆಗಳ ಪ್ರಭಾವದಿಂದ ಹೊಸ ಬಗೆಯ ಚಿಂತನೆಗೆ ಮಹಿಳೆಯರು ತೆರೆದುಕೊಳ್ಳಲು ಅನುವು ಮಾಡಿಕೊಟ್ಟಿತು.

ಹೀಗೆ ಆಧುನಿಕ ಶಿಕ್ಷಣದಿಂದ ಬಂಧ ಮುಕ್ತಿಯನ್ನು ಪಡೆದುಕೊಂಡ ದಲಿತ ಮಹಿಳೆಯರು ಮೀಸಲಾತಿ ಉದ್ಯೋಗವನ್ನು ಪಡೆದುಕೊಂಡು ಹೊಸ ವ್ಯಕ್ತಿತ್ವವನ್ನು ರೂಪಿಸಿಕೊಳ್ಳತೊಡಗಿದರು. ಆ ಮೂಲಕ ಪುರುಷಾಧಿಕ್ಯತೆಯಿಂದ ಬಿಡುಗಡೆ ಹೊಂದಿ ಸಾಂಪ್ರದಾಯಿಕ ಜಾತಿ, ಧರ್ಮ ಸಂಕೊಲೆಗಳಿಂದ ವಿಮುಖವಾಗಿ ಹೊಸ ಬದುಕನ್ನು ಕಟ್ಟಿಕೊಳ್ಳಲು ಹವಣಿಸುತ್ತಿರುವ ನೆಲೆಗಳನ್ನು ತಮ್ಮ ಕಾವ್ಯಗಳಲ್ಲಿ ಪಡಿಮೂಡಿಸಿದ್ದಾರೆ.

ಸಾಮಾನ್ಯ ಮಹಿಳೆಯರಿಗಿಂತ ದಲಿತ ಮಹಿಳೆಯರ ಬದುಕುಗಳು ಬೇರೆಯದ್ದೇ ಆಗಿವೆ. ಜಾತಿಯ ಅಸಮಾನತೆ, ಪಿತೃಪ್ರಧಾನ ಮೌಲ್ಯಗಳಿಂದಾಗುವ ಶೋಷಣೆ, ದೇವರು, ಧರ್ಮದ ಹೆಸರಿನಲ್ಲಿ ನಡೆಯುವ ದೇವದಾಸಿ ಪದ್ಧತಿಯಂತಹ ಲೈಂಗಿಕ ಕಿರುಗುಳಗಳು ಮೊದಲಾದುವುಗಳನ್ನು ಹೊಸ

ತಲೆಮಾರಿನ ದಲಿತ ಕವಯಿತ್ರಿಯರಾದ ಅನುಸೂಯ ಕಾಂಬಳೆ, ಎನ್. ಡಿ. ವೆಂಕಟಮ್ಮ ಅಂಜಲಿ ಬೆಳಗಲ್, ಸುಜಾತ ಚಲವಾದಿ, ಶೋಭಾ ಹರಿಜನ್ ಮೊದಲಾದವರ ಕಾವ್ಯಗಳು ಈ ಬಗೆಗೆ ಬೆಳಕು ಚೆಲ್ಲಿವೆ. ಕಾನೂನುಗಳೆಷ್ಟೇ ಇದ್ದರೂ ಇಂದಿಗೂ ದೇವದಾಸಿಪದ್ಧತಿಯಂತಹ ಸಾಮಾಜಿಕ ಅನಿಷ್ಟ ಪದ್ಧತಿಗಳು ದಲಿತ ಹೆಣ್ಣು ಮಕ್ಕಳನ್ನು ಶೋಚನೀಯ ಸ್ಥಿತಿಗೆ ಕೊಂಡೊಯ್ದದ್ದರ ಬಗೆಗೆ ಪ್ರತಿಭಟಿಸುವ ಪರಿ ಇವರ ಕಾವ್ಯಗಳಲ್ಲಿ ಕಂಡುಬರುತ್ತದೆ.
ಭಾರತದ ಅನೇಕ ಭಾಗಗಳಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ದಲಿತ ಮಹಿಳೆಯರ ಮೇಲೆ ಶೋಷಣೆ ನಡೆಯುತ್ತಾ ಬಂದಿದೆ. ಯಲ್ಲಮ್ಮನಂತಹ ಹೆಣ್ಣು ಗ್ರಾಮೀಣ ದೇವತೆಗಳ ಹೆಸರಿನಲ್ಲಿ ಕೆಳಜಾತಿಯ, ಹಿಂದುಳಿದ ಹಾಗೂ ದಲಿತ ವರ್ಗದ ಹೆಣ್ಣು ಮಕ್ಕಳು ಲೈಂಗಿಕ ದಾಸ್ಯಕ್ಕೆ, ವೇಶ್ಯಾವಾಟಿಕೆಗೆ ತಳ್ಳಲಾಗುತ್ತಿದೆ.ಇದನ್ನು ಬಸವಿ ಬಿಡುವುದು, ಜೋಗುತಿ ಬಿಡುವುದು ಮೊದಲಾದ ಹೆಸರಗಳಿಂದ ಕರೆಯಲಾಗುತ್ತಿದೆ. ಅಂದರೆ ದೇವರ ಹೆಸರಿನಲ್ಲಿ ದಲಿತ ಹೆಣ್ಣು ಮಗಳನ್ನು ಮೇಲ್ವರ್ಗವು ಲೈಂಗಿಕ ಕ್ರಿಯೆಗೆ ಬಳಸಿಕೊಳ್ಳುವ ಅಮಾನವೀಯ ಪದ್ಧತಿ ಇಂದಿಗೂ ಪ್ರಚಲಿತದಲ್ಲಿರುವುದು ವಿಪರ್ಯಾಸವೇ ಸರಿ.ಇದಕ್ಕೆ ಪೌರಾಣಿಕ ಆಯಾಮವೂ ಇದೆ, ಧಾರ್ಮಿಕ ಆಯಾಮವೂ ಇದೆ.ಇಂತಹ ಅಮಾನುಷಾ ಪದ್ಧತಿಯಿಂದ ದಲಿತ ಹೆಣ್ಣು ಮಕ್ಕಳ ಬದುಕು ಅದಃಪತನಕ್ಕೆ ಕೊಂಡೊಯ್ಯುತ್ತಿರುವದರ ಬಗೆಗೆ ನಮ್ಮ ತಲೆಮಾರಿನ ದಲಿತ ಮಹಿಳೆಯರು ತೆರೆದಿಟ್ಟಿದ್ದಾರೆ.'ದೇವದಾಸಿ' ಕವಿತೆಯಲ್ಲಿ ಹೀಗೆ ಹೇಳುತ್ತಾರೆ.

"ಬಾಲ್ಯದಲ್ಲಿ ತಂದೆ
ಯೌವನದಲ್ಲಿ ಗಂಡ
ಮುಪ್ಪಿನಲ್ಲಿ ಮಗ
ರಕ್ಷಿಸುತ್ತಾರೆಂದು
ಮನು ಹೇಳಿದ್ದಾನೆ
ಇದು ನಮ್ಮ ಅನುಭವಕ್ಕೆ
ಬಂದೇ ಇಲ್ಲ"[1]

ಮನುಧರ್ಮ ಶಾಸ್ತ್ರವು ಪುರುಷ ಪ್ರಧಾನ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ.ಇದು ಸಮಾನತೆಯನ್ನು ಪ್ರತಿಪಾದಿಸುವುದಿಲ್ಲ ಬದಲಾಗಿ ಅಸಮಾನತೆ ಲಿಂಗತಾರತಮ್ಯ, ಜಾತಿ ತಾರತಮ್ಯದ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ ಎನ್ನುವುದಕ್ಕೆ ಈ ಪದ್ಯವೇ ಸಾಕ್ಷಿಯಾಗಿದೆ.ಬಾಲ್ಯದಲ್ಲಿ ತಂದೆ, ಯೌವನದಲ್ಲಿ ಗಂಡ, ಮುಪ್ಪಿನಲ್ಲಿ ಮಗ ಹೆಣ್ಣನ್ನು ರಕ್ಷಿಸುತ್ತಾರೆಂದು ಹೇಳಲಾಗಿದೆ.ಇದು ಮಹಿಳೆಯ ಅಧೀನ ಸ್ಥಿತಿಯೊಂದನ್ನು ಪ್ರತಿಪಾಧಿಸುತ್ತದೆ.ಒಂದು ವೇಳೆ ಪುರುಷನು ಹೆಣ್ಣಿನ ರಕ್ಷಣೆಗೆ ನಿಂತರೂ ಅದು ದಲಿತ ಮಹಿಳೆಯರನ್ನು ಲೈಂಗಿಕ ದಾಸ್ಯಕ್ಕೆದೂಡಲ್ಪಟ್ಟ ಹೆಣ್ಣಿಗೆ ಅನ್ವಯಿಸುವುದಿಲ್ಲ ಎಂಬುದು ಪ್ರಸ್ತುತ ಕವಿತೆಯ ಸಾಲುಗಳಲ್ಲಿ ಕಂಡುಬರುತ್ತದೆ.

"ಗಂಡನಿದ್ದರೂ
ಹೆಸರು ಹೇಳುವಂತಿಲ್ಲ
ದೇವರೇ ಗಂಡನೆಂದು
ಹೇಳಬೇಕಂತೆ
ನಮ್ಮ ಮಕ್ಕಳನ್ನು
ದೇವರೇ ಕಾಯಬೇಕು
ಅವರಿಗೆ ಅವನೇ
ತಂದೆಯಾದರೂ
ನಂಬಿಕೆಯೆಂಬುದಿಲ್ಲಿ
ಅಪನಂಬಿಕೆಯ
ಹಾವಿನ ಹೆಡೆ ಸದಾ
ನಮ್ಮ ತಲೆಯ ಮೇಲೆ
ನೆರಳಾಡಿಸುತ್ತದೆ"[2]

ದೇವದಾಸಿ ಪದ್ಧತಿಗೆ ಬಲಿಯಾದ ಹೆಣ್ಣಿನ ಚಿಂತಾಜನಕ ಸ್ಥಿತಿಯೊಂದನ್ನು ಕಣಿಗೆ ಕಟ್ಟುವಂತೆ ಸುಕನ್ಯಾ ಮಾರುತಿಯವರು ಸಾಲುಗಳಲ್ಲಿ ಬಿಡಿಸಿ ಹೇಳಿದ್ದಾರೆ.'ಗಂಡನಿದ್ದರೂ ಹೇಳುವಂತಿಲ್ಲ, ದೇವರೇ ಅವಳ ಗಂಡ' ಎಂಬುದರಲ್ಲಿ ದೇವರು ಮತ್ತು ಧಾರ್ಮಿಕ ಸಂಪ್ರದಾಯದ ಹೆಸರಿನಲ್ಲಿ ಹೆಣ್ಣಿನ ಬದುಕನ್ನು ಯಾವ ಮಟ್ಟಕ್ಕೆ ಕೊಂಡಯ್ಯಲಾಗುತ್ತಿದೆ ಎಂಬುದನ್ನು ನಾವು ಚಿಂತಿಸಬೇಕಾಗಿದೆ.ಇಂತಹ ಸ್ಥಿತಿಗೆ ಹೆಣ್ಣನ್ನು ದೂಡಲು ಪುರುಷಾಧಿಕ್ಯತೆ ಹುನ್ನಾರ ಮತ್ತು ನಮ್ಮ ಮೌಢ್ಯತೆಗಳೇ ಕಾರಣವೆಂದು ಈ ಕವಿತೆಯು ಮಾರ್ಮಿಕವಾಗಿ ಹೇಳುತ್ತದೆ.

"ಕೂತರೆ ನಿಂತರೆ
ನಮ್ಮ ಕಡೆ ಕೈ ತೋರುವ
ಜನರೆದುರು ಬದುಕುವ
ನಾವು ನಮ್ಮ ಮಕ್ಕಳೆದುರು
ತಲೆಯೆತ್ತಲು ಮುಜುಗರ
ರೆಕ್ಕೆ ಬಲಿತ ಮಕ್ಕಳು
ನಮ್ಮನ್ನು ತಾಯೆಂದು ಕರೆಯಲೂ
ನಾಚುತ್ತವೆ ಪಾಪ !"[3]

ಬಸಿವಿಗೆ ಬಿಟ್ಟ ಹೆಣ್ಣು ಮಕ್ಕಳನ್ನು ಈ ಸಾಮಾಜಿಕ ವ್ಯವಸ್ಥೆಯು ತಿರಸ್ಕೃತ ಭಾವನೆಯಿಂದ ನೋಡುತ್ತದೆ ಅಂತದ್ದರಲ್ಲಿ ಅವರ ಮಕ್ಕಳು ಹೇಗೆ ತಲೆಯೆತ್ತಿ ಬದುಕಲು ಸಾಧ್ಯ?ತಾನು ದೇವದಾಸಿ ಎಂದು ಗೊತ್ತಿದ್ದ ಆ ಮಹಿಳೆಯು ತನ್ನ ಮಕ್ಕಳೆದುರು ಹೇಗೆ ಗೌರವ ಭಾವದಿಂದ ಇರಲು ಸಾಧ್ಯ? ಈ ಸಮಾಜದಿಂದಷ್ಟೇ ಅಲ್ಲ ತನ್ನ ಕುಟುಂಬದಿಂದಲೂ ಸಹ ತಿರಸ್ಕಾರ ಭಾವಕ್ಕೆ ಒಳಗಾದವಳಾಗುತ್ತಾಳೆ ಎಂಬುದನ್ನು ಪ್ರಸ್ತುತ ಕವಿತೆ ಧ್ವನಿಸುತ್ತದೆ.

"ಅಪ್ಪನಿಲ್ಲದೆ ಹಡೆದ
ಅವ್ವನ ಮೊಲೆಗಂಟಿನಲ್ಲೆ?
ಶಾಲೆಗೆ ಹಚ್ಚುವಾಗ
ತನ್ನ ಹೆಸರನ್ನೇ ಮರೆತ
ಅಪ್ಪನ ಚಪ್ಪಲಿನಲ್ಲೆ?
ತಂದೆಯ ಜಾಗದಲ್ಲಿ
ತಾಯಿ ಹೆಸರು ತುಂಬಿದ
ಮಾಸ್ತರರ ಪೆನ್ನಿನಲ್ಲೆ?
ಎಲ್ಲಿ ಹುಡುಕಲಿ ನನ್ನ
ಕಳಕೊಂಡ ಮುಂಜಾವುಗಳನ್ನು"[4]

'ದೇವದಾಸಿಯ ಮಗಳ ಸ್ವಗತ' ಕವಿತೆಯಲ್ಲಿ ದೇವದಾಸಿಯ ಪದ್ಧತಿಗೆ ಒಳಗಾದವರ ಮಕ್ಕಳ ಧಾರುಣ ಸ್ಥಿತಿಯೊಂದನ್ನು ಕವಿತೆ ಬಿಚ್ಚಿಡುತ್ತದೆ. 'ಕಳೆದುಕೊಂಡ ತನ್ನನ್ನು ಹುಡುಕುತ್ತಾ ಇಲ್ಲದ ಅಪ್ಪನನ್ನು ಅವ್ವನ ಮೊಲೆಯಲ್ಲಿ ಹುಡುಕಲೇ ಅಪ್ಪನ ಚಪ್ಪಲಿನಲ್ಲೆ?ಮಾಸ್ತರರ ಪೆನ್ನಿನಲ್ಲೆ?ಎಲ್ಲಿ ಹುಡುಕಲಿ ನನ್ನ ಕಳೆದುಕೊಂಡ ವ್ಯಕ್ತಿತ್ವವನ್ನು' ಎಂದು ಕವಿಯಿತ್ರಿ ಪ್ರಶ್ನಿಸುತ್ತಾರೆ.ಮುಂದುವರೆದು ತಾನು ದೇವದಾಸಿಯ ಮಗಳು

ಎನ್ನುವ ಕಾರಣಕ್ಕೆ ತನ್ನನ್ನು ಈ ವ್ಯವಸ್ಥೆ ನೋಡುವ ಕ್ರಮದ ಬಗ್ಗೆ ಕವಯಿತ್ರಿ ಹೀಗೆ ಬರೆಯುತ್ತಾರೆ.

"ನನ್ನೊಡನೆ ಆಡಬಂದ
ಗೆಳತಿಯರ ಎಳೆದೊಯ್ಯುವ
ಅವ್ವಂದಿರ ತಿರಸ್ಕಾರದಲ್ಲೆ?
ಅವರ ಅಪ್ಪಂದಿರ
ಜೊಲ್ಲು ಸುರಿಸುವ ತುಟಿಗಳಲ್ಲೆ?
ಎಲ್ಲಿ ಹುಡುಕಿಕೊಳ್ಳಲಿ ನನ್ನ
ಕಳೆದುಕೊಂಡ ಮುಂಜಾವುಗಳನ್ನ?"[5]

ಹೀಗೆ ತಿರಸ್ಕಾರಕ್ಕೆ ಒಳಗಾದ ದೇವದಾಸಿಯ ಮಕ್ಕಳ ಯಾತನಾಮಯ ಬದುಕಿನ ಚಿತ್ರಣವನ್ನು ಮೇಲಿನ ಸಾಲುಗಳಲ್ಲಿ ಕಾಣಬಹುದು.ತನ್ನ ಹೆತ್ತವರನ್ನು ತಿರಸ್ಕಾರದಿಂದ ನೋಡುವುದಲ್ಲದೇ ಅವರ ಮಕ್ಕಳೂ ಸಹ ಈ ಸಮಾಜಿಕ ವ್ಯವಸ್ಥೆಯಲ್ಲಿ ಹೊರಗೆ ದೊಡಲ್ಪಟ್ಟವರಾಗಿದ್ದಾರೆ. ಇದಕ್ಕೆ ಈ ಸಮಾಜದ ಪುರುಷಾಧಿಪತ್ಯವೇ ಹೊರತು ಮತ್ತೇನು ಅಲ್ಲ. ಪುರುಷಾಧಿಪತ್ಯವು ದಲಿತ ಹೆಣ್ಣುಗಳ ಅಸ್ತಿತ್ವವನ್ನು ಇಲ್ಲವಾಗಿಸಿದೆ.ಕಳೆದುಕೊಂಡ ತನ್ನ ಅಸ್ತಿತ್ವವನ್ನು ಎಲ್ಲಿ ಹುಡುಕಲಿ ಎಂದು ಕವಯಿತ್ರಿಯು ವ್ಯವಸ್ಥೆಯನ್ನು ಪ್ರಶ್ನಿಸುತ್ತಾರೆ.
"ಒಬ್ಬ ಹೆಣ್ಣು ಮಗಳು ದೇವದಾಸಿಯಾದಳೆಂದರೆ ಆಕೆಯ ಮೇಲೆ ದೇವಾಲಯದ ಮುದ್ರೆ ಬಿದ್ದಂತೆಯೇ ಸರಿ.ಅವಳು ಸಮಾಜದಲ್ಲಿ ಭಿನ್ನವಾಗಿಯೇ ಗುರುತಿಸಲ್ಪಡುತ್ತಾಳೆ.ಎಲ್ಲ ಹೆಣ್ಣು ಮಕ್ಕಳಿಗೆ ಮದುವೆ, ಮನೆ, ಕುಟುಂಬ ಮುಂತಾದ ಒಡನಾಟಗಳಿಂದ ಅವಳನ್ನು ದೂರ ಉಳಿಯುವಂತೆ ಮಾಡಲಾಗುತ್ತದೆ.ಈ ಪದ್ಧತಿಗೆ ಬಲಿಯಾಗುವವರು ದಲಿತ ಹೆಣ್ಣು ಮಕ್ಕಳಾಗಿರುತ್ತಾರೆ.ದಲಿತ ಹೆಣ್ಣುಮಕ್ಕಳು ತಮ್ಮ ಬದುಕನ್ನು ಹೀಗೆ ಬಲಿಕೊಡಬೇಕಾಗುತ್ತದೆ. ಬೆಳೆದ ಹೆಣ್ಣು ಮಕ್ಕಳನ್ನು ಸಂಪ್ರದಾಯ, ಮೂಢನಂಬಿಕೆ, ದೇವರು, ಧರ್ಮದ ನೆಪದಲ್ಲಿ ದೇವಿಗೆ ಮೀಸಲು ಬಿಡಿಸಿ ಆಕೆಯೊಂದಿಗೆ ಲೈಂಗಿಕ ಸಖ್ಯ ಪಡೆಯಲು ಪರವಾನಗಿಯನ್ನು ಸಿದ್ಧ ಮಾಡಿಕೊಳ್ಳುತ್ತಿದ್ದರು.ಈ ಅನಿಷ್ಠ ಪದ್ಧತಿಯ ಮೂಲ ಬೇರು ಧರ್ಮವೇ ಆಗಿದೆ. ನೇರವಾಗಿ ದೇವರೊಂದಿಗೆ ಅಲ್ಲದಿದ್ದರೂ ಆ ದೇವರ ಸನ್ನಿಧಾನದಲ್ಲಿರುವ ಪೂಜಾರಿಯಿಂದ ದೈಹಿಕ ಸಂಬಂಧ ಮಾಡಿದರೆ ತಾವು ಪವಿತ್ರರಾಗುತ್ತೇವೆ; ತಮ್ಮ ಕಲ್ಯಾಣವಾಗುತ್ತದೆ ಎಂಬ ಮೂಢನಂಬಿಕೆ ಹೆಚ್ಚು ಬೆಳೆದಿರುವುದರಿಂದ ಈ ಪದ್ಧತಿ ಇಂದು ಬೆಳೆದು ಬರಲು ಮುಖ್ಯ ಕಾರಣವಾಗುತ್ತದೆ. ಸಮಾಜದಲ್ಲಿನ ಶೋಷಕರು, ವಂಚಕರು, ಲಂಪಟರು, ವ್ಯಸನಿಗಳು ಇದರ ಲಾಭ ಮಾಡಿಕೊಂಡರು"[6] ಈ ಹಿನ್ನೆಲೆಯಲ್ಲಿ ಕವಿಯತ್ರಿ ಎನ್. ಡಿ. ವೆಂಕಟಮ್ಮ ಅವರು ದೇವದಾಸಿ ಮಹಿಳೆ ಕುರಿತು 'ನೀನ್ಯಾರಿಗೆ ದಾಸಿ?'ಕವಿತೆಯಲ್ಲಿ ಹೀಗೆ ಪ್ರಸ್ತಾಪಿಸುತ್ತಾರೆ.

"ಓ ಮಗಳೇ
ದಾಸಿಯಾದೇಕೆಂದು ಚಿಂತಿಸುವೆ
ಕೇಳು ನಿನ್ನ
ಹಿಂದಿನ- ಇಂದಿನ ಕಥೆಯಾ"[7]

ಎಂದು ದೇವದಾಸಿ ಪದ್ಧತಿಗೆ ಒಳಗಾದ ದಲಿತ ಹೆಣ್ಣು ಮಕ್ಕಳ ಚಿಂತಾಜನಕದ ನೋವಿನ ಕಥನವನ್ನು ನಿರೂಪಿಸಿದ್ದಾರೆ.ಅಂದರೆ ಅಜ್ಞಾನ, ಅನಕ್ಷರತೆಯು ಮೌಢ್ಯತೆಗೆ ಕಾರಣವಾಗಿದ್ದುದರಿಂದಲೇ ನಿರ್ದಿಷ್ಟ ತಳಸಮುದಾಯದ ಹೆಣ್ಣು ಮಕ್ಕಳನ್ನು ಇಂತಹ ಅನಿಷ್ಠ ಪದ್ಧತಿಗೆ ದೂಡಲಾಗುತ್ತಿದೆ ಎಂದು ಅಭಿಪ್ರಾಯಪಡುತ್ತಾರೆ.ಉದಾಹರಣೆಗೆ ಮುಂದುವರೆದ ಕವಿತೆಯ ಸಾಲುಗಳು ಹೀಗೆ ಕಂಡು ಬರುತ್ತವೆ.

"ನಂಬಿದರು ಹಿರಿಯರು
ದೇವರು..... ದೈವ ಶಕ್ತಿ
ಕಲ್ಲು ಮೂರ್ತಿ ಕಂಡು
ಕೈ ಮುಗಿದು ಬೇಡಿದರು
ಹರಕೆಗಳ ಹೊತ್ತುಕೊಂಡು
ಮೀಸಲು ಕಟ್ಟಿದರು
ಹುಟ್ಟುವ ಮಗಳಿಗೆ
ದೇವ ಮುದ್ರೆ ಕಟ್ಟುವೆವೆಂದು"[8]

ಎಂತಹ ಕ್ರೂರ ಪದ್ಧತಿ ಎಂದರೆ 'ಕಲ್ಲುದೇವರ ಮುಂದೆ ಕೈಮುಗಿದು ಹರಕೆ ಹೊತ್ತುಕೊಂಡು ಮಗು ಹುಟ್ಟುವ ಮೊದಲೇ ಹೆಣ್ಣು ಮಗುವನ್ನು ದೇವಮುದ್ರೆಯೊತ್ತಿ ದೇವರಿಗೆ ಮುಡಿಪಾಗಿಡುವುದು' ಎಂತಹ ಅಮಾನುಷ ಎಂಬುದು ಈ ಮೂಲಕ ತಿಳಿಯುತ್ತದೆ.ಹೀಗೆ ಅಜ್ಞಾನ ಮತ್ತು ಮೌಢ್ಯತೆಯ ಸಲುವಾಗಿ ಹುಟ್ಟಿದ ಕೂಸನ್ನೇ ಈ ಕ್ರೂರ ಪದ್ಧತಿಗೆ ತನ್ನ ತಂದೆ ತಾಯಿಗಳು ತಳ್ಳಿದರೆ ಇದನ್ನೇ ನೆಪವಾಗಿಟ್ಟುಕೊಂಡು ಪಟ್ಟಭದ್ರ ಹಿತಾಸಕ್ತಿಗಳು ಆಕೆಯನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡು ಆಕೆಯ ಬದುಕನ್ನು ನಶ್ವರಗೊಳಿಸುವ ವ್ಯವಸ್ಥೆಯೊಂದು ನಮ್ಮ ಕಣ್ಣೆದುರಿಗಿರುವುದು ಹೇಯವೆನ್ನಿಸುತ್ತದೆ.

"ಊರ ದೇವರ
ಗುಡಿಯ ಮುಂದೆ
ಹಾಲುಗಲ್ಲದ ಹಸುಳೆ
ಅಭ್ಯಂಜನ ಸ್ನಾನದಿ
ಮುಳುಗೇಳಿಸಿ, ಬೆತ್ತಲೆಗೊಳಿಸಿ
ಬೇವಿನುಡುಗೆಯ ತೊಡಿಸಿ
ಉದೋ ಉದೋ ಎನ್ನುತಾ
ಉದಕ ಪ್ರೋಕ್ಷಿಸಿ
ಕಲ್ಲು ದೇವರೇ
ನಿನ್ನ ಕೈ ಹಿಡಿದು ನಡೆಸೆಂದು
ಬಿಣ್ಣ ಬಿರುದು ಹೊತ್ತು
ನೀ ಆದೆ ದೇವದಾಸಿ"[9]

ದೇವದಾಸಿ ಪದ್ಧತಿಯ ವಿಧಿ-ವಿಧಾನ, ರೀತಿ-ನೀತಿಗಳನ್ನು ನೇರ ನಿರೂಪಣೆಯ ಕ್ರಮದಲ್ಲಿಯೇ ವೆಂಕಟಮ್ಮನವರು ಮಂಡಿಸಿದ್ದಾರೆ.ಈ ಕವಿತೆಯಲ್ಲಿ ದೇವದಾಸಿಯಾಗುವಾಗ ಕೈಗೊಳ್ಳುವ ರೀತಿ ನೀತಿಗಳನ್ನು ಗಮನಿಸಿದಾಗ ಯಾವುದೋ ಸಂಭ್ರಮಕ್ಕಾಗಿ ಹೊಸ ಕಾರ್ಯ ಮಾಡುತ್ತಿದ್ದಾರೆ ಎಂಬಂತೆ ವ್ಯವಸ್ಥೆಗೊಳಿಸಿಸುವುದು ಮನುಷ್ಯ ಸಮಾಜಕ್ಕೆ ದ್ಯೊತಕವೆನ್ನಿಸುತ್ತದೆ.

"ಬಲಿತ ರೆಕ್ಕೆಯ ಪುಕ್ಕ ಕಿತ್ತು
ತಿಂದುಂಡು ತೇಗಿದರು
ಢರ್ ಎಂದು ಡೇಗಿದರು
ಕುಣಿದು ಕುಪ್ಪಳಿಸಿ
ನಾವ್ ಗಂಡೆಂದು ಸಾರಿದರು"[10]

ಹೆಣ್ಣನ್ನು ದೇವದಾಸಿಯಾಗಿಸಲು ಅಷ್ಟು ವಿಜ್ರಂಭಣೆಯಿಂದ ಉತ್ಸವದೋಪಾದಿಯಲ್ಲಿ ತಳವರ್ಗದ ಹೆಣ್ಣನ್ನು ಕತ್ತಲೆಯ ಕೂಪಕ್ಕೆ ತಳ್ಳಿದ್ದು ಒಂದು ನೆಲೆಯಾದರೆ, ಈ ಕತ್ತಲ ಜಗತ್ತಿಗೆ ಬಂದ ಹಣ್ಣಿನ

ಜೊತೆ ಊರ ಗಂಡರು ನಡೆದುಕೊಳ್ಳುವ ವಿವರಗಳನ್ನು ಕವಯಿತ್ರಿಯು ದಾಖಲಿಸಿದ್ದಾರೆ. ವಯಸ್ಸಿಗೆ ಬಂದ ಹೆಣ್ಣನ್ನು ಊರಿನ ಗೌಡ, ಪಟೇಲ, ಪೂಜಾರಿ ಮೊದಲಾದ ಮೇಲ್ವರ್ಗದ ಗಂಡುಗಳು ಆಕೆಯನ್ನು ಲೈಂಗಿಕ ಕ್ರಿಯೆಗೆ ಬಳಸಿಕೊಂಡು ಬೆಳದಿಂಗಳಂತಿರಬೇಕಿದ್ದ ಹೆಣ್ಣಿನ ಬದುಕನ್ನು ಈ ಕಿರಾತಕರು, ಕೀಚಕರು ತಮ್ಮ ವೈಯಕ್ತಿಕ ತೆವಲಿಗಾಗಿ ಹೆಣ್ಣಿನ ಬದುಕನ್ನೇ ಬಲಿತೆಗೆದುಕೊಂಡದ್ದು ಮಾತ್ರ ಪುರುಷ ಪ್ರಧಾನ ವ್ಯವಸ್ಥೆ ಎಂದರೆ ತಪ್ಪಾಗಲಾರದು.ಮುಂದುವರೆದಂತೆ 'ಮಗಳೇ ನೀನೇ ನೀನಾಗಿಲ್ಲ ದೇವರಿಗೆ ದಾಸಿ ಹಾಳು ಶೋಷಣೆ ಕ್ರೂರ ವ್ಯವಸ್ಥೆ ಮಾಡಿದೆ ನಿನ್ನ ಈ ಗಂಡಿಗೆ ಎಂದಿದಿಗೂ ದಾಸಿ' ಎಂದು ಹೆಣ್ಣಿಗೆ ಬದುಕುವ ಅವಕಾಶವನ್ನು ಕಿತ್ತುಕೊಂಡು, ಧಾರ್ಮಿಕ ಚೌಕಟ್ಟಿನಲ್ಲಿ ಆಕೆಯನ್ನು ಹಿಡಿದಿಟ್ಟಿಕೊಂಡು ಪುರುಷನಿಗೆ ಅಧೀನಳನ್ನಾಗಿಸುವ ಕ್ರೂರ ವ್ಯವಸ್ಥೆ ಇದಾಗಿದೆ.ಆದುದರಿಂದ ಹೆಣ್ಣು ಇಂತಹ ಅನೇಕ ಬಗೆಯ ಬಂಧನಗಳಿಂದ ಬಿಡುಗಡೆ ಹೊಂದಿ, ಹೆಣ್ಣು ಒಬ್ಬ ಮನುಷ್ಯಳಾಗಿ ಬದುಕುವ ಅವಕಾಶ ಸಿಗಬೇಕಾಗಿದೆ. ಹೆಣ್ಣಿನ ಆಸೆ, ಆಕಾಂಕ್ಷೆ ಭಾವನೆ ತುಮುಲಗಳು ಮುಕ್ತವಾದ ಆಯ್ಕೆಗೆ ಒಳಪಟ್ಟು ಸುಂದರ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗಬೇಕು. ಪುರುಷ ಪ್ರಧಾನ ದೃಷ್ಟಿಕೋನ ಅಳಿದು ಮಹಿಳಾ ಪ್ರಧಾನ ದೃಷ್ಟಿಕೋನ ಮುನ್ನೆಲೆಗೆ ಬರಬೇಕಾಗಿದೆ

'ಬಂದೂಕು ಹಿಡಿದ ಕೈಗಳು' ಕವನ ಸಂಕಲದಲ್ಲಿ ದೇವದಾಸಿ ಪದ್ಧತಿಯ ಬಗೆಗೆ ಅಂಜಲಿ ಬೆಳಗಲ್ ಎಂಬ ಯುವ ಕವಯಿತ್ರಿಯು 'ಮುತ್ತು ಕೊಟ್ಟವಳು' ಎಂಬ ಕವಿತೆಯೊಂದನ್ನು ಬರೆದಿದ್ದಾರೆ.ಈ ಕವಿತೆಯಲ್ಲಿ ನಿರೂಪಕಿಯನ್ನು ತನ್ನ ಹೆತ್ತವರೇ ಇಂತಹ ಅನಿಷ್ಠ ಪದ್ಧತಿಗೆ ದೂಡಿರುವ ಸಂದರ್ಭವೊಂದನ್ನು ಚಿತ್ರಿಸಿದ್ದಾರೆ. ಉದಾಹರಣೆಗೆ–

"ಮುತ್ತು ಕೊಟ್ಟಳು ನನ್ನವ್ವ
ಮುತ್ತು ಕಟ್ಟಿಸಿದಳು ನನ್ನವ್ವ
ದೇವಗೆ ದಾಸಿ ಎಂದು
ಹಸಿ ಮೈಗೆ ಅರಿಸಿನ ಹಚ್ಚಿ ಕರಿಮಣಿ
ಕಟ್ಟಿಸಿದಳು ನನ್ನವ್ವ"[11]

ಹೀಗೆ ದಲಿತ ಹೆಣ್ಣು ಮಕ್ಕಳನ್ನು ಹೆತ್ತ ತಂದೆ ತಾಯಿಗಳೆ ದೇವರು–ಧರ್ಮಗಳೆಂಬ ಕುರುಡು ನಂಬಿಕೆಯಿಂದ ತಮ್ಮ ಮಗಳ ಭವಿಷ್ಯವನ್ನು ನರಕದ ಕೂಪಕ್ಕೆ ತಳ್ಳಲಾಗುತ್ತಿದೆ.'ಮುತ್ತು ಕೊಟ್ಟ ಹೆತ್ತ ತಾಯಿಯು ಮುತ್ತು ಕಟ್ಟಿಸಿ ದೇವರಿಗೆ ದಾಸಿಯಾಗಿಸಿದಳು ಎಂದು ಒಡಲಾಳದ ನೋವನ್ನು ನಿವೇದಿಸಿಕೊಳ್ಳುತ್ತಾಳೆ.ತಲೆಮಾರುಗಳಿಂದ ತಲೆಮಾರುಗಳು ಉರುಳಿದರೂ ಇಂತಹ ಅನಿಷ್ಠ ಪದ್ಧತಿಗಳ ಅಂಗಳದಲ್ಲಿ ದೇವರ ಪೂಜೆಯ ನೆಪದಲ್ಲಿ ಬದುಕು ಕಳೆದುಕೊಂಡ ಕಥೆಯು ಇಲ್ಲಿ ವ್ಯಕ್ತವಾಗಿದೆ.

"ಗಂಡು ದಿಕ್ಕಿಲ್ಲದ ತವರಿಗೆ
ಕಚ್ಚೆ ಪಂಚೆಗಳ ಹೆಜ್ಜೆ ಹೆಜ್ಜೆಗೂ
ನನ್ನ ಗೆಜ್ಜೆ ಪೂಜೆ ಮಾಡಿಸಿದಳು ನನ್ನವ್ವ
ನೋಡಿ ಹಲ್ಕಿರಿದವರೆಷ್ಟೋ
ರಕ್ತರಾತ್ರಿಯಲಿ ನನ್ನ ಜರಿದವರೆಷ್ಟೋ
ಆದರೂ ನನ್ನೆದೆಗೆ ಮುತ್ತಿಕ್ಕಿ
ಆಲಿಂಗಿಸಿ ಕಣ್ಣೊರೆಸಿದಳು ನನ್ನವ್ವ"[12]

ಇಲ್ಲಿಯೂ ಸಹ ಪುರುಷ ಪ್ರಧಾನತೆಯನ್ನು ಕವಿಯತ್ರಿಯು ಪ್ರಶ್ನಿಸುತ್ತಾರೆ. 'ಗಂಡು ದಿಕ್ಕಿಲ್ಲದ ತವರಿಗೆ ಕಚ್ಚೆ ಪಂಚೆ ಹೆಜ್ಜೆ ಹೆಜ್ಜೆಗೂ ನನ್ನ ಗೆಜ್ಜೆ ಪೂಜೆ ಮಾಡಿಸಿದಳು ನನ್ನವ್ವ' ಎಂದು ಹೇಳುವಲ್ಲಿ ಒಂದು ಗಂಡಿನ ಸ್ಥಾನದಲ್ಲಿ ನಿಂತು ಕುಟುಂಬವನ್ನು ನಿಭಾಯಿಸಬೇಕಿದ್ದ ಈ ಹೆಣ್ಣು ಈಗ ಅಂತ ಹಲವು ಗಂಡುಗಳಿಗೆ ಆಹಾರವಾದ ಛಿದ್ರ ಬದುಕಿನ ಕರಾಳತೆಯನ್ನು ಕಂಡು ನಕ್ಕವರೆಷ್ಟೋ ಅತ್ತವರೆಷ್ಟೋ ಆದರೆ ತನ್ನ ತಾಯಿ ಮಾತ್ರ ತನ್ನ ಕುಟುಂಬ ನಿರ್ವಹಣೆಯಾಗುತ್ತಿದೆಯಲ್ಲಾ ಎಂದು ಮಗಳನ್ನು ಆಲಾಂಗಿಸುತ್ತಾ ಮುತ್ತಿಡುತ್ತಿದ್ದಾಳೆ. ಬಡತನ ನೀಗಿಸಿಕೊಳ್ಳಲು ಇಂತಹ ಮಾರ್ಗ ಹಿಡಿದಿರುವುದು ಒಂದು ಕಡೆಯಾದರೆ, ಅವರ ಬಡತನವೇ ಈ ಹೆಣ್ಣು ಮಕ್ಕಳ ಕರಾಳ ಬದುಕಿಗೆ ಕಾರಣವಾಗಿದೆ.ಮುಖ್ಯವಾಗಿ ಪುರುಷಾಧಿಪತ್ಯವೇ ಪ್ರಧಾನವಾಗಿ ಹೆಣ್ಣನ್ನು ಲೈಂಗಿಕ ಕ್ರಿಯೆಗೆ ಬಳಸಿಕೊಳ್ಳುವ ಉನ್ನಾರ ಇದಾಗಿದೆ ಎಂಬ ವಿಷಾದವು ಈ ಕವಿತೆಯಲ್ಲಿ ವ್ಯಕ್ತವಾಗಿದೆ.

"ಇದೆ ನೋಡು ನಿನ್ನ ಅಸಹಾಯಕತೆ
ಶೋಷಿಸಿದವರೆಲ್ಲಾ
ಸ್ವಚ್ಛಂದವಾಗಿ ಹಾರಾಡಿದರೆ
ಎಲ್ಲಾ ಸಹಿಸಿಕೊಂಡು
ಅವರ ಚಾಕರಿ ಮಾಡುತ್ತಾ
ಅವರ ಉದ್ಧಾರಕ್ಕಾಗಿ
ತಾಯಿಯಾದೆ ಹೆಂಡತಿಯಾದೆ
ಪ್ರೇಯಸಿಯಾದೆ ಮುದುಕಿಯಾದೆ"[13]

ಕವಯಿತ್ರಿ ಜಯದೇವಿ ಗಾಯಕವಾಡ ಅವರು ಹೆಣ್ಣಿನ ಅಸಹಾಯಕತೆಯೇ ಪುರುಷನು ಸ್ತ್ರೀಯನ್ನು ಶೋಷಣೆ ಮಾಡಲು ಕಾರಣವಾಗಿದೆ ಎಂದು ಅಭಿಪ್ರಾಯಿಸುತ್ತಾರೆ. ಹೆಣ್ಣು ಈ ಅಸಹಾಯಕತೆಯನ್ನು ಬದಿಗೊತ್ತಿ ಅಧೀನತೆಯನ್ನು ಪ್ರಶ್ನಿಸಿ, ಹೊರ ಬಂದಾಗ ಮಾತ್ರ ಆಕೆ ಸ್ವಾಭಿಮಾನಿಯಾಗಿರಲು ಸಾಧ್ಯ. ಇಲ್ಲಿವಾದರೆ ತಾನು ಪುರುಷನ ಅಡಿಯಾಳಾಗಿಯೇ ಉಳಿಯಬೇಕಾಗುತ್ತದೆ ಎಂದು ಹೆಣ್ಣಿನ ಅಸಾಹಾಯಕತೆಯ ಬಗೆಗೆ ಮರುಗುತ್ತಾರೆ.

"ಶೋಷಣೆಯ ಅಣ್ಣಂದಿರೇ
ದುಡಿಯುವ ತಂದೆಗಳೇ
ಅಸಮಾನತೆಯ ಕತ್ತಲೆಗೆ ಬೆಳಕ ಹಚ್ಚಿಬಿಡಿ
ಸಂಪ್ರದಾಯ ಮಾರಿಗೆ ಸಮಾದಿ ಮಾಡಿಬಿಡಿ"[14]

ಸ್ತ್ರೀ ಶೋಷಣೆ ಎಂಬುದು ಇಂದು ನೆನ್ನೆಯ ಪ್ರಶ್ನೆಯಲ್ಲ. ಅದು ಅನಾದಿ ಕಾಲದಿಂದಲೂ ಬಂದಿರುವಂತದ್ದು.ಅದು ಗಂಡು ಶ್ರೇಷ್ಠ, ಸ್ತ್ರೀ ಕನಿಷ್ಠ ಎಂಬ ತಾರತಮ್ಯವು ಪರುಷ ಪ್ರಧಾನತೆಯ ಅನುಕೂಲಕ್ಕಾಗಿ ಮಾಡಿಕೊಂಡಿರುವ ಹುನ್ನಾರವೇ ಆಗಿದೆ.ಅದು ಪ್ರಸ್ತುತ ಸಂದರ್ಭದಲ್ಲಿ ಲಿಂಗಭೇದ ಹಾಗೂ ಸಂಪ್ರದಾಯಗಳ ಹೆಸರಿನಲ್ಲಿ ಸ್ತ್ರೀಯನ್ನು ಕನಿಷ್ಠವಾಗಿ ಕಾಣುತ್ತಿರುವುದು ಬೇಸರದ ಸಂಗತಿಯಾಗಿದೆ.ಇದನ್ನು ತೊಡೆದುಹಾಕಲು ಕೇವಲ ಹೆಣ್ಣಿನಿಂದಾಗಲಿ ಗಂಡಿನಿಂದಾಗಲಿ ಸಾಧ್ಯವಿಲ್ಲ ಗಂಡು ಮತ್ತು ಹೆಣ್ಣು ಪರಸ್ಪರರು ಮನಸ್ಸು ಮಾಡಿದಾಗ, ಶ್ರೇಷ್ಠ ಮತ್ತು ಕನಿಷ್ಠತೆಯ ಭಾವನೆಗಳನ್ನು ಬದಿಗಿರಿಸಿದಾಗ ಮಾತ್ರ ಸ್ತ್ರೀ ಸಮಾನತೆ ಕಾಣಲು ಸಾಧ್ಯ.ಈ ಹಿನ್ನೆಲೆಯಲ್ಲಿ ಪ್ರಸ್ತುತ ಕವಿತೆ ಶೋಷಣೆಯ ಅಣ್ಣಂದಿರೇ ಅಸಮಾನತೆಯ ಕತ್ತಲೆ ಮತ್ತು ಸಂಪ್ರದಾಯ ಮಾರಿಯನ್ನು ಹೊರದೂಡಿದಾಗ ಮನುಷ್ಯ ಸಮಾಜದಲ್ಲಿ ಬೆಳಕ ಕಾಣಬಹುದು.ಶೋಷಕರ ಶೋಷಣೆಯಿಂದ ಶೋಷಿತರು ಹೊರ ಬರಬೇಕು ಶೋಷಿಕೊಳ್ಳುವವರು ಇರುವತನಕ ಶೋಷಕರು ಇದ್ದೇ ಇರುತ್ತಾರೆ ಎಂದು ಕವಯಿತ್ರಿ ಶೋಷಣೆಯಿಂದ ಬಿಡುಗಡೆ

ಬಯಸುತ್ತಾರೆ.

ಡಾ. ಸುಜಾತ ಚಲವಾದಿಯವರು ಬರೆಯುತ್ತಾರೆ 'ತನ್ನ ತನ್ನ ಜಾತಿ ಕುಲ ಬಾಂಧವರೇ ಹೇಗೆ ಶೋಷಣೆಯನ್ನು ಅದರಲ್ಲಿಯೂ ಸ್ತ್ರೀ ಶೋಷಣೆಯನ್ನು ಮಾಡುತ್ತಾರೆ' ಎಂಬುದಕ್ಕೆ ಈ ಸಾಲುಗಳನ್ನು ಕಾಣಬಹುದು

"ಹೊಲೆ ಮಾದಿಗರ ರಾಜಕುಮಾರನಾತ
ಹೊಲೆ ಮಾದಿಗರ ಶೋಷಿಸುವಾತ
ಸ್ತ್ರೀಯರ ತಲೆ ಹಿಡುಕನಾತ"[15]

ಈ ಕವಿತೆ ದಲಿತ ರಾಜಕಾರಣಿಗಳ ಮತ್ತೊಂದು ಮುಖವಾಡವನ್ನು ಬಯಲಿಗೆಳೆಯುವ ಪ್ರಯತ್ನವನ್ನು ಮಾಡುತ್ತದೆ.ತನ್ನದೇ ಸಮುದಾಯದ ಜನರನ್ನು ವೋಟಿಗಾಗಿ ಬಳಸಿಕೊಂಡು ಅವರನ್ನು ಉದ್ದಾರ ಮಾಡುವ ನೆಪದಲ್ಲಿ ಜನರ ಸಂಪತ್ತನ್ನೇ ಕಬಳಿಸುವ ಕಪಟ ರಾಜಕಾರಣಿಗಳು ಆ ಸಮುದಾಯದ ಹೆಣ್ಣುಗಳನ್ನೂ ಸಹ ಅನ್ಯ ಮಾರ್ಗಕ್ಕಾಗಿ ಬಳಸಿಕೊಳ್ಳುತ್ತಿರುವ ಜನನಾಯಕರ ಬಗೆಗೆ ಕವಯಿತ್ರಿಯ ಆಕ್ರೋಶ ವ್ಯಕ್ತಪಡಿಸುತ್ತಾರೆ. 'ಬೇಲಿಯೇ ಎದ್ದು ಹೊಲ ಮೇಯ್ದಂತೆ' ತನ್ನ ಸಮುದಾಯಕ್ಕೆ ಆಶ್ರಯವಾಗಬೇಕಿದ್ದ ನಾಯಕನು ತನ್ನ ಸಮುದಾಯವನ್ನೇ ಶೋಷಿಸುತ್ತಿರುವ ಪರಿ ನಮ್ಮ ಕಣ್ಣ ಮುಂದಿದೆ.ಆದ್ದರಿಂದಲೇ ಕಳೆದೆ ಎಪ್ಪತ್ತು ವರ್ಷಗಳಿಂದ ಮೀಸಲಾತಿಯನ್ನು ಪಡೆದುಕೊಂಡರೂ ದಲಿತರ ಬದುಕುಗಳ ಮಾತ್ರ ಕತ್ತಲೆಯ ಕೂಪದಲ್ಲಿರುವುದಕ್ಕೆ ಮತ್ತೊಂದು ಕಾರಣ ಬೇಕಿಲ್ಲವೆನಿಸುತ್ತದೆ.

**ಕೊನೆಟಿಪ್ಪಣಿ**

1. ಸುಕನ್ಯಾ ಮಾರುತಿ–ನಾನೆಂಬ ಮಾಯೆ, ಸಪ್ನ ಬುಕ್ ಹೌಸ್, ಬೆಂಗಳೂರು,2011,ಪುಟ–232
2. ಅದೇ–ಪುಟ–233
3. ಅದೇ–ಪುಟ–233
4. ಅದೇ– ಪುಟ–233
5. ಅದೇ–ಪುಟ–223
6. ಡಾ. ಸಿದ್ಧರಾಮ ಕಾರಣಿಕ–ದೇವದಾಸಿ ಮತ್ತು ಬೆತ್ತಲಸೇವೆ, ಲಡಾಯಿ ಪ್ರಕಾಶನ, ಗದಗ,2013, ಪುಟ–48
7. ಎನ್.ಡಿ. ವೆಂಕಟಮ್ಮ–ಬಯಲೇ ಸಂಗಾತಿ, ಶಂಭೂಕ ಪ್ರಕಾಶನ, ಬಳ್ಳಾರಿ, 2004, ಪುಟ–45
8. ಅದೇ–ಪುಟ–45
9. ಅದೇ–ಪುಟ–46
10. ಅದೇ–ಪುಟ–47
11. ಅಂಜಲಿ ಬೆಳಗಲ್ –ಬಂದೂಕು ಹಿಡಿದ ಕೈಗಳು, ಅಂಬೆ ಪ್ರಕಾಶನ, ಬಳ್ಳಾರಿ, 2017,ಪುಟ–08
12. ಅದೇ–ಪುಟ–08
13. ಜಯದೇವ ಗಾಯಕವಾಡ –ಮರುಭೂಮಿ ಮಾಡದಿರಿ,ಕರುನಾಡು ಪ್ರಕಾಶನ, 2013,ಪುಟ–55
14. ಅದೇ–ಪುಟ–47
15. ಸುಜಾತ ಚಲವಾದಿ–ಕೊರಗು ದಲಿತ ಸಾಹಿತ್ಯ ಪರಿಷತ್ತು, ಗದಗ, 2015 ಪುಟ–56

**ಪರಾಮರ್ಶನಗಳು**


1. ಅರವಿಂದ ಮಾಲಗತ್ತಿ – ದಲಿತ ಯಾನ, ಸೀಮಾತೀತ ಸಾಹಿತ್ಯ ಚರಿತ್ರೆ, ಸಂಪುಟ1, ಪ್ರಸಾರಾಂಗ, ಮೈಸೂರು ವಿವಿ, ಮೈಸೂರು
2. ಟಿ.ಪಿ ಅಶೋಕ್ – ಕಾವ್ಯ ಪ್ರೀತಿ, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
3. ಜಿ. ಎಸ್. ಆಮೂರ – ಸೀಮೋಲ್ಲಂಘನೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, 2002
4. ಆಶಾದೇವಿ ಎಂ. ಎಸ್. – ಬೆಳಕಿಗಿಂತ ಬೆಳ್ಳಗೆ, ಸಾಹಿತ್ಯ ಅಕಾಡೆಮಿ, ನವದೆಹಲಿ
   - ನಡುವೆ ಸುಳಿವ ಆತ್ಮ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, 2011
   - ಉರಿಚಮ್ಮಾಳಿಗೆ (ಅನು), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2015
5. ತಿರುಮಲೇಶ್ ಕೆ.ವಿ. ಕಾವ್ಯಕಾರಣ, ಪ್ರಸಾರಾಂಗ, ಹಂಪಿ, 2007
6. ತೇಜಸ್ವಿನಿನಿರಂಜನ/ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಸೀಮಂತಿನಿ ನಿರಂಜನ ಅಭಿನವ ಪ್ರಕಾಶನ, 2014
7. ದಂಡಪ್ಪ ವಿಚಾರ ಸಾಹಿತ್ಯ, ಕುವೆಂಪು ಭಾಷಾ ಭಾರತಿ,
8. ಪ್ರಭಾವತಿ ಎಸ್.ವಿ (ಸಂ) ಆಧುನಿಕ ಕನ್ನಡ ಮಹಿಳಾ ಕಾವ್ಯ ಚರಿತ್ರೆ, ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ, ವಿಶ್ವವಿದ್ಯಾಲಯ, ವಿಜಯಪುರ 2013
9. ಪ್ರೀತಿ ಶುಭಚಂದ್ರ – ಸೃಜನೆಯ ಮೂಡು, ರೂಪ ಪ್ರಕಾಶನ, ಮೈಸೂರು, 2007
10. ಮಂಗಳ ಪ್ರಿಯದರ್ಶಿನಿ – ಸ್ತ್ರೀವಾದ ಮತ್ತು ಮಹಿಳಾ ಪ್ರವೇಶಿಕೆ, ಮ.ಅ. ಕೇಂದ್ರ, ಹಂಪಿ ವಿಶ್ವವಿದ್ಯಾಲಯ
11. ಮೇಟಿ ಮಲ್ಲಿಕಾರ್ಜುನ ತಾತ್ವಿಕತೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, 2017
12. ಮಲ್ಲಿಕಾ ಘಂಟಿ ದಲಿತ ಸಾಹಿತ್ಯ ಚಳವಳಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2008
13. ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್–ಕಾವ್ಯ ವ್ಯಾಖ್ಯಾನ ಕಥನ, ಸಪ್ನ ಬುಕ್ ಹೌಸ್, ಬೆಂಗಳೂರು–2017